ಮೂಲ ದಾವಾ ನಂಃ 72/2017

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **21-03-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಆರ್.ಎನ್. ವಕೀಲರಿಂದಃ**

ನಾನು ದಾರಿಯ ಸಲುವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. 1 ನೇ ವಾದಿಯು ದಾವೆಯನ್ನು ಹೂಡಿದ್ದಾರೆ. ನನ್ನ ಪ್ರಮಾಣ ಪತ್ರವನ್ನು ನಮ್ಮ ವಕೀಲರು ಬರೆದಿದ್ದಾರೆ. ನಾನು ಸದ್ರಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನೀಡಿದ್ದೇನೆ. ಸದ್ರಿ ದಾರಿಯು ಸ.ನಂಃ 559 ಹಿಸ್ಸಾ ಕ ದಲ್ಲಿ ಬರುತ್ತದೆ. ಸ.ನಂಃ 559 ಹಿಸ್ಸಾ ಕ ಅಂದಾಜು 7 ಗುಂಟೆ ಕ್ಷೇತ್ರವಿದೆ. ಸದ್ರಿ ಸರ್ವೆ ನಂಬರಿನಲ್ಲಿ ಒಟ್ಟೂ 4 ಮನೆಗಳಿವೆ. ಸದ್ರಿ ಸರ್ವೆ ನಂಬರಿನಲ್ಲಿ ವಾದಿಯರ ಹಾಗೂ ಶಿವು ನಾಗು ಮುಕ್ರಿ , ಗಣೇಶ ಶಂಭು ಮುಕ್ರಿರವರ ಮನೆಗಳಿವೆ.

ಸದ್ರಿ ರಾಜ ರಸ್ತೆಯು ನಮ್ಮ ಮನೆಯಿಂದ ರಸ್ತೆಗೆ ಹೋಗುತ್ತದೆ. ಸದ್ರಿ ರಾಜ ರಸ್ತೆಯು ಪೂರ್ವದಿಂದ ಪಶ್ಚಿಮಕ್ಕೆ ಹಾದು ಹೋಗಿದೆ. ಸದ್ರಿ ರಾಜ ರಸ್ತೆಯು ಅಂದಾಜು 15-20 ಫೂಟ್ ಅಗಲವಿದೆ. ಸದ್ರಿ ರಾಜ ರಸ್ತೆಯು ಕಡತೋಕಾದಿಂದ ಹಳದೀಪುರ ಕಡೆಗೆ ಹೋಗುತ್ತದೆ. ಸದ್ರಿ ರಸ್ತೆಯ ದಕ್ಷಿಣ ದಿಕ್ಕಿಗೆ ಸ.ನಂಃ 559 ಹಿಸ್ಸಾ ಕ ಬರುತ್ತದೆ. ಸದ್ರಿ ರಾಜ ರಸ್ತೆಯ ಮೊದಲಿಗೆ ನಮ್ಮ ಮನೆ ಬರುತ್ತದೆ. ಸದ್ರಿ ಸರ್ವೆ ನಂಬರಿನಲ್ಲಿ ಬರುವಂತಹ ಎಲ್ಲಾ ಮನೆಗಳು ದಕ್ಷಿಣ ದಿಕ್ಕಿಗೆ ಬರುತ್ತದೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ಪ್ರತಿವಾದಿಯ ಮನೆ ಬರುತ್ತದೆ. ಪ್ರತಿವಾದಿಯ ಮನೆಯ ಬಲಬದಿಗೆ ರಸ್ತೆ ಬರುತ್ತದೆ.

ನಮ್ಮ ಮನೆಯ ಬಲಬದಿಗೆ ರಸ್ತೆ ಬರುತ್ತದೆ. 1 ನೇ ವಾದಿಯು ನನ್ನ ಸ್ವಂತ ಅಣ್ಣನಾಗಿದ್ದಾನೆ. 2 ನೇ ವಾದಿಯು ನಮ್ಮ ಪಕ್ಕದ ಮನೆಯವರು. ನಮ್ಮ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿದೆ. ನಮ್ಮ ಮನೆಯಿಂದ ರಾಜ ರಸ್ತೆಯು ಅಂದಾಜು 40 ಫೂಟ್ ದೂರದಲ್ಲಿದೆ. ನಮ್ಮ ಮನೆಯ ಮುಂದೆ ಅಂಗಳವಿದೆ. ನಮ್ಮ ಮನೆಯ ಸುತ್ತಲೂ ಬೇಲಿ ಇಲ್ಲ. ಅಲ್ಲಿರುವಂತಹ ಎಲ್ಲಾ ಮನೆಗಳ ಸುತ್ತಲೂ ಬೇಲಿ ಯಾ ಕಂಪೌಂಡ್ ಇರುವುದಿಲ್ಲ. ನಮ್ಮ ಮನೆಯ ಬಲಬದಿಗೆ ಪ್ರತಿವಾದಿಯ ಮನೆ ಇರುತ್ತದೆ. ನಮ್ಮ ಮನೆಯ ಎಡಬದಿಗೆ 1 ನೇ ವಾದಿಯ ಮನೆ ಬರುತ್ತದೆ ಹಾಗೂ ಅವನ ಮನೆಯ ಬಲಬದಿಗೆ ರಾಜ ರಸ್ತೆ ಬರುತ್ತದೆ. 1 ನೇ ವಾದಿಯು ರಾಜ ರಸ್ತೆಗೆ ಹೋಗಲು ಗೇಟನ್ನು ಮಾಡಿಕೊಂಡಿದ್ದಾನೆ. ಸದ್ರಿ ಗೇಟ್‌ನ 5 ಫೂಟ್ ಅಂತರದಲ್ಲಿ 1 ನೇ ವಾದಿಯ ಮನೆ ಬರುತ್ತದೆ. ಸದ್ರಿ ದಾರಿಯ ಮೂಲಕ ವಾಹನಗಳು ತಿರುಗಾಡುತ್ತವೆ. ಸದ್ರಿ ರಾಜ ರಸ್ತೆಯಿಂದ 1 ನೇ ವಾದಿಯ ಮನೆಗೆ ಹೋಗಲು ಅವನದ್ದೇ ದಾರಿ ಇದ್ದು ನಮ್ಮ ಮನೆಯ ಮುಂದೆ ಹಾದು ಹೋಗಬೇಕೆಂಬ ಅವಶ್ಯಕತೆ ಇಲ್ಲ. ಸದ್ರಿ ದಾರಿಯ ಕುರಿತಾಗಿ ತಕರಾರು ಇರುವುದಿಲ್ಲ. ಸದ್ರಿ ನಮ್ಮ ರಸ್ತೆಗೆ ಪ್ರತಿವಾದಿಯು ತಕರಾರು ಮಾಡುತ್ತಾನೆ. ಸದ್ರಿ ನಮ್ಮ ಅಣ್ಣನ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.